ಶ್ರೀಮತಿ ಬನವರಾಜೇಶ್ವರಿ.—ಇದರ ಕೆಲಸ 1958ರಲ್ಲಿ ಪ್ರಾರಂಭವಾಯ್ತು. 1961ರಲ್ಲಿ ಆಕ್ಸೆಪ್ಟೆಷನ್ ಮಾಡಿ ತಿಳಿಸಿ ಎಂದು ಪಬ್ಲಿಕ್‌ವರ್ಕ್ಸ್ ಇಲಾಖೆಗೆ ತಿಳಿಸಲಾಯ್ತು. ಇನ್ನೂ ಆ ಕೆಲಸ ಪೂರ್ತಿಯಾಗಿಲ್ಲ, ವಿಳಂಬವಾಗಿದೆ. ಮೊದಲು ನೆಗೋಷಿಯೇಟ್ ಮಾಡಿ ಒಪ್ಪಿಗೆ ಪಡೆಯಬೇಕೆಂದು ಪ್ರಯತ್ನಮಾಡುವುದಕ್ಕೆ 2–3 ವರ್ಷವಾಯ್ತು.

ಶ್ರೀ ಎಂ. ನಾಗಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ ಅನಿವಾರ್ಯವಾದ ಕಾನೂನಿನ ಆಚರಣೆಯಿಂದ ವಿಳಂಬವಾಗಿದೆ ಎಂದು ಹೇಳಲಾಗಿದೆ. ಅದಲ್ಲದೆ ಇಲಾಖೆ ಅಭಿಪ್ರಾಯ ಕೇಳಿದ್ದೇವೆ, ಅದು ಬರುವುದು ನಿಧಾನವಾಗಿದೆ ಎಂದು ಬೇರೆ ಹೇಳಿದ್ದೀರಿ. ಈ ಎರಡರಲ್ಲಿ ಯಾವುದು ಸರಿ?

ಶ್ರೀಮತಿ ಬನವರಾಜೇಶ್ವರಿ.—ಎರಡೂ ಕೂಡ ಸರಿ.

ಶ್ರೀ ಎಂ. ಎಸ್. ಕೃಷ್ಣನ್.—ಈಗಾಗಲೆ 11 ವರ್ಷದಿಂದ ಈ ವ್ಯವಹಾರ ನಡೆಯುತ್ತಿದೆ. ಎಂದು ಉತ್ತರ ಕೊಡಲಾಗಿದೆ. ಕಾನೂನು ತಕರಾರಿನ ಪ್ರಶ್ನೆ ಬಗೆಹರಿದಿಲ್ಲ ಎಂದು ಅರ್ಥವಾಗಿದೆ. ಎಷ್ಟು ವರ್ಷ ತಕರಾರು ಬಗೆಹರಿಯಲು ಬೇಕೆಂಬುದನ್ನು ಹೇಳಲು ಸಾಧ್ಯವೇ? 11 ವರ್ಷದಿಂದ ಇರುವ ತಕರಾರೇನು?

ಶ್ರೀಮತಿ ಬನವರಾಜೇಶ್ವರಿ.—2-2-1969ರಲ್ಲಿ ಸೈಟ್ ಇನ್‌ಸ್ಪೆಕ್ಷನ್ ಮಾಡಿ ಅಂತಿಮವರದಿ ಕೊಡಿ ಎಂದು ಸಂಬಂಧಪಟ್ಟ ಆಫೀಸರಿಗೆ ತಿಳಿಸಲಾಗಿದೆ. ಇಷ್ಟರಲ್ಲೇ ಖಚಿತವಾದ ಅಭಿಪ್ರಾಯವನ್ನು ಕೊಡುತ್ತಾರೆ.

Damage in Hemavathi Bridge at Sakaleshpur

127. **Sri H. B. JWALANAIAH** (Hassan).—

Will the Minister for Public Works be pleased to state :—

(*a*) whether a damage was caused in the newly built Hemavathy Bridge at Sakaleshpur;

(*b*) whether it was due to the negligence of the contractor;

(*c*) the conditions contemplated in the tender of this work?

Sri BASAVARAJ MAGAVI (Deputy Minister for Public Works).—

(*a*) Yes.

(*b*) The causes are under examination.

(*c*) The whole work shall be executed as per the relevant clauses of the standard specifications for Roads and Bridge Construction (Madras Highway Manual) and other specifications and execution instructions of Engineer-in-charge of work.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈ ಸೇತುವೆಯನ್ನು ಹೊಸದಾಗಿ ಕಟ್ಟಲಾಗಿದೆ. ಎಷ್ಟು ವರ್ಷದ ಹಿಂದೆ ಇದನ್ನು ಪಿ. ಡಬ್ಲ್ಯೂ. ಡಿ. ಕಂಟ್ರಾಕ್ಟರಿಗೆ ಕೊಟ್ಟರು? ಯಾವ ರೀತಿಯ ಡ್ಯಾಮೇಜ್ ಆಗಿದೆ?

†ಶ್ರೀ ಬನವರಾಜ ಮಾಗಾವಿ.—ಗರ್ಡರ್ ಬ್ಯಾಕ್ ಪೋರ್ಷನ್ನಿನಲ್ಲಿ ಒಂದು ಕ್ರ್ಯಾಕ್ ಆಗಿದೆ. 1963 ರಲ್ಲಿ ಈ ಕೆಲಸವಾಯ್ತು. 1965 ರಲ್ಲಿ ಫೈನಲ್ ಮೆಷರ್‌ಮೆಂಟ್ ಮಾಡಲಾಗಿದೆ. This crack was detected in 1968.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈ ಸೇತುವೆ ಓರ್ ಕ್ಯಾರಿಯಿಂಗ್ ರಸ್ತೆಯಲ್ಲಿದೆ. ಈ ಕೆಲಸ ಮಾಡುತ್ತಿದ್ದಾಗ ಇರಾಖೆಯ ತಜ್ಞರು ಇದನ್ನು ಪರಿಶೀಲನೆ ಮಾಡಿದರು. ಕ್ರ್ಯಾಕ್ ಬರಲು ಕಾರಣ ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿ ಕೊಡಲಾಗಿದೆ. ಎಷ್ಟು ದಿವಸದಿಂದ ಪರಿಶೀಲನೆಯಲ್ಲಿದೆ ? ಯಾರು ಪರಿಶೀಲಿಸುತ್ತಿದ್ದಾರೆ ?

ಶ್ರೀ ಬಸವರಾಜ ಮಾಗಾವಿ.—ಈಗ ನಮ್ಮ ಚೀಫ್ ಇಂಜಿನಿಯರು, ಸೂಪರಿಂಟೆಂಡಿಂಗ್ ಇಂಜಿನಿಯರು ಎಕ್ಸಾಮಿನ್ ಮಾಡಿದ್ದಾರೆ. ಒಂದು ಜೆಕ್ನಿಕಲ್ ಕಮಿಟಿ ಅಪಾಯಿಂಟ್ ಮಾಡಿ ಅವರಿಂದ ಒಂದು ಆಬ್ಯೆರಾದ ರಿಪೋರ್ಟ್ ತರಿಸಬೇಕೆಂದು ಮಾಡಿದ್ದೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಎಕ್ಸಾಮಿನ್ ಮಾಡಿದ್ದಾರೆ ಎಂದು ಹೇಳಿದಿರಿ, ಇದರ ಬಗ್ಗೆ ಅವರು ಏನು ವರದಿಯನ್ನು ಕೊಟ್ಟಿದ್ದಾರೆ ?

ಶ್ರೀ ಬಸವರಾಜ ಮಾಗಾವಿ.—ಯಾವುದರಿಂದ ಆಗಿದೆ ಎಂಬುದು ಸುಸ್ಪಷ್ಟವಾಗಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಒಂದು ಜೆಕ್ನಿಕಲ್ ಕಮಿಟಿ ಮಾಡಿ ಅವರಿಂದ ಫೈನಲ್ ರಿಪೋರ್ಟ್ ತರಿಸಿಕೊಂಡು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಇದ್ದೇವೆ.

Sri C. K. RAJAIAH SHETTY.—What is the cost of this bridge and what would be the amount needed to set right the damages ?

Sri BASAVARAJ MAGAVI.—The cost of the bridge is about 11 lakhs of rupees. It is very difficult to say what would be the cost to set right the damages, as the work will have to be undertaken only after the final report of the technical committee is received.

ಶ್ರೀ ಕೆ. ಎಚ್. ರಂಗನಾಥ್.—ಈ ಸೇತುವೆ ಈಗ ವಾಹನ ಸಂಚಾರಕ್ಕೆ ಯೋಗ್ಯವಾದ ಪರಿಸ್ಥಿತಿಯಲ್ಲದೆಯೇ ?

ಶ್ರೀ ಬಸವರಾಜ ಮಾಗಾವಿ.—ವಾಹನ ಸಂಚಾರ್ಯಕ್ಕೆ ಅಡತಡೆಯಾಗದ ರೀತಿಯಲ್ಲ ಇನ್ನೊಂದು ಮೇಸನರಿ ಪಿಲ್ಲರ್ ಕೊಟ್ಟು ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈ ಸೇತುವೆ ಕಟ್ಟಿರುವ ಮಧ್ಯದ ಕಂಬದಲ್ಲಿ ಹಳೇ ಮರದ ಬೇರು ಬಂದಿದ್ದು ಮುಂಜಿಯೇ ಅದನ್ನು ಪಿ. ಡಬ್ಲ್ಯು. ಡಿ. ಅವರು ಗಮನಕ್ಕೆ ತೆಗೆದುಕೊಂಡು ಅದರ ಬಗ್ಗೆ ಸೂಕ್ತವಾದ ಎಚ್ಚರಿಕೆಯನ್ನು ವಹಿಸಿದ್ದರೇ ?

ಶ್ರೀ ಬಸವರಾಜ ಮಾಗಾವಿ.—ಕ್ರ್ಯಾಕ್ ಬಂದದ್ದು ಹಳೇ ಮರದ ಬೇರಿನಿಂದ ಅಲ್ಲ ಎಂಬುದನ್ನು ಖಚಿತಪಟ್ಟುಕೊಂಡಿದ್ದೇವೆ.

Major and Medium Irrigation Projects

399. **Sri C. K. RAJAIAH SHETTY** (Chicknayakanahalli).—

Will the Chief Minister be pleased to state :—

(*a*) the number of medium and major irrigation Projects undertaken in the years 1965–66, 66–67 and 67–68 and their cost (Districtwise) ;

(*b*) the tenders accepted by the Government above the estimated rates and the increased percentage of each work ;

(*c*) the extra expenditure incurred due to the increased percentage ?